

# ಕನಸಿನ ರಾಕೆಟ್‌ನಲ್ಲಿ ರಚನಾ

**ನಟಿಯಾಗುವ ಕನಸಿಗೆ ಮನಸೊಳಗೇ ನೀರೆರೆಯುತ್ತ ಬಂದ ರಚನಾಗೆ ಈಗ ಅದು ಫಲ ಕೊಡುತ್ತಿರುವ ಖುಷಿ. ಹಲಬಗೆಯ ಪಾತ್ರಗಳಲ್ಲಿ ನಟಿಸಬೇಕು; ನನ್ನ ಕೆಲಸದ ಮೂಲಕವೇ ನಾನು ಗುರ್ತಿಸಿಕೊಳ್ಳಬೇಕು ಎನ್ನುವುದು ಅವರ ಹಂಬಲ.**

■ **ಪದ್ಮನಾಭ ಭಟ್**

ಡಾರ್ಲಿಂಗ್ ಕೃಷ್ಣ ನಿರ್ದೇಶನದ 'ಲವ್ ಮಾಕ್ಟೇಲ್' ಹೃದಯವನ್ನು ಆರ್ದ್ರಗೊಳಿಸುವ ಸಿನಿಮಾ. ಆ ಸಿನಿಮಾ ನಮ್ಮೊಳಗೆ ಎಬ್ಬಿಸುವ ವಿಷಾದದ ಅಲೆಯಲ್ಲಿಯೇ ತೇಲಿಬರುವ ಒಂದು ನಗೆಯ ಹಾಯಿದೋಣಿಯೂ ಇದೆ. ಚಟಪಟ ಮಾತನಾಡುತ್ತ, ನಾಯಕನನ್ನು ತನ್ನ ಪ್ರೇಮಪಾಶಕ್ಕೆ ಕೆಡವಲು ಸಾಧ್ಯವೇ ಎಂದು ಬಗೆಬಗೆಯಲ್ಲಿ ಹೊಂಚು ಹಾಕುತ್ತ, ತನ್ನ ಚಿನಕುರುಳಿತನದಿಂದಲೇ ಲವಲವಿಕೆಯುಕ್ಕಿಸುವ ಹುಡುಗಿ ಅವಳು. ಅವಳ ಹೆಸರು ರಚನಾ.

ಮಲೆನಾಡಿನ ಮಂಜು ಕವಿದ ರಸ್ತೆಗಳು ತನ್ನದೇ ಜಗತ್ತು ಎಂಬಂತೆ ಲೀಲಾಜಾಲವಾಗಿ ವರ್ತಿಸುವ ರಚನಾ ಅವರ ಮೂಲವೂ ಮಡಿಕೇರಿಯೆಂಬ ಮಂಜಿನ ಸೆರಗಿನ ಊರು. ತಮ್ಮ ಬದುಕಿನ ಆರಂಭದ ಎರಡು ವರ್ಷಗಳನ್ನು ಕಳೆದಿದ್ದು ಕಡಲ ತಡಿಯ ಮಂಗಳೂರಿನಲ್ಲಿ. ನಂತರ ಬೆಂಗಳೂರಿನ ತೆಕ್ಕೆ ಸೇರಿದ ಈ ಹುಡುಗಿಯ ಓದು, ನಟನೆಯ ಆಸಕ್ತಿ ಎಲ್ಲ ಮೊಳಕೆಯೊಡೆದಿದ್ದು ಹೆಮ್ಮರವಾಗಿ ಬೆಳೆದಿದ್ದೆಲ್ಲ ಮಹಾನಗರದಲ್ಲಿಯೇ.

ಸಾಮಾನ್ಯವಾಗಿ ಈಗಿನ ನಟಿಯರನ್ನು ನಟನಾ ಆಸಕ್ತಿ ಮೊಳೆತಿದ್ದು ಹೇಗೆ ಎಂದುಕೇಳಿದರೆ, 'ನಾನು ಚಿತ್ರರಂಗಕ್ಕೆ ಬರ್ತೀನಿ ಅಂತ ಅಂದ್ಕೊಂಡೇ ಇರ್ಲಿಲ್ಲ. ನಂಗೆ ಅದ್ರ ಬಗ್ಗೆ ಎಷ್ಟೊಂದು ಆಸಕ್ತಿನೂ ಇರ್ಲಿಲ್ಲ. ನಾನು ನಟನೆಗೆ ಇಳಿದಿದ್ದು ಆಕ್ಸಿಡೆಂಟಲ್' ಎಂಬ ಉತ್ತರವೇ ಬರುತ್ತದೆ. ಆದರೆ ರಚನಾ ವಿಷಯದಲ್ಲಿ ಹಾಗಲ್ಲ. ಇಲ್ಲಿ ಆಕಸ್ಮಿಕ ಎನ್ನುವ ಶಬ್ದಕ್ಕೆ ಅರ್ಥವೇ ಇಲ್ಲ. ಬಾಲ್ಯದಲ್ಲಿಯೇ ಮನಸೊಳಗೆ ಅವರು ನಿರ್ಮಿಸಿಕೊಂಡಿದ್ದ ಬದುಕಿನ ಗುರಿಯ ಹೆದ್ದಾರಿಯ ತುದಿ ಇದ್ದಿದ್ದು ಚಂದನವನದಲ್ಲಿಯೇ.

'ತುಂಬ ಚಿಕ್ಕವಳಾಗಿದ್ದಾಗಿನಿಂದಲೇ ನನಗೆ ನಟನೆಯಲ್ಲಿ ಆಸಕ್ತಿ ಇತ್ತು. ಸಿನಿಮಾ ನಟಿ ಆಗಬೇಕು ಎಂದೇ ಕನಸು ಕಾಣುತ್ತ ಬೆಳೆದವಳು ನಾನು. ಈ ಕನಸು ಯಾವತ್ತೂ ಹಿನ್ನೆಲೆಗೆ ಸರಿಯಲಿಲ್ಲ. ಈಗ ನನಸಾಗಿದೆ ಅಷ್ಟೆ' ಎಂದು ನಗುತ್ತಾರೆ ರಚನಾ.

ಈಗಿನ್ನೂ ಬಿ.ಕಾಮ್. ಅಂತಿಮ ವರ್ಷದಲ್ಲಿ ಓದುತ್ತಿರುವ ಈ ತರಳೆಗೆ ತನ್ನ ಸಿನಿಬದುಕಿನ ನಾಳೆಗಳ ಬಗ್ಗೆ ಥರಹೇವಾರಿ ಕನಸುಗಳಿವೆ. ಅವೆಲ್ಲವೂ ನನಸಾಗುತ್ತವೆ ಎಂಬ ಗಟ್ಟಿ ನಂಬಿಕೆಯೂ ಇದೆ.

'ಸಾಮಾನ್ಯವಾಗಿ ಸಿನಿಮಾ ಬ್ಯಾಕ್‌ಗ್ರೌಂಡ್ ಇಲ್ಲದವರು ಚಿತ್ರರಂಗಕ್ಕೆ ಬರುವ ಮುನ್ನ ಮಾಡೆಲಿಂಗ್ ಮಾಡುತ್ತಾರೆ. ಮಾಡೆಲಿಂಗ್ ಮಾಡಿದರೆ ಚಿತ್ರರಂಗಕ್ಕೆ ಪ್ರವೇಶ ಪಡೆಯುವುದು ಸುಲಭ ಆಗುತ್ತದೆ ಎಂಬುದು ಒಂದು ಲೆಕ್ಕಾಚಾರ. ನಾನೂ ಇದಕ್ಕೆ ಹೊರತಲ್ಲ. ಮೂರು ವರ್ಷಗಳ ಹಿಂದೆಯೇ ಮಾಡೆಲಿಂಗ್ ಮಾಡಲು ಆರಂಭಿಸಿದೆ. ಹಲವು ಫ್ಯಾಷನ್